**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 563/2019**
**ಸಾಕ್ಷಿಗೆ ದಿನಾಂಕಃ 12.10.2021 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಜುಳ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಬಸವರಾಜು | ಸಿ.ಡಬ್ಲ್ಯೂ-3 |
| ವಯಸ್ಸು | : | 50 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ನೂರಲಕುಪ್ಪೆ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಫ್ರಾಸ1 ನನ್ನ ಗಂಡ, ಚಾಸ2 ಮತ್ತು 4 ನನ್ನ ಮಕ್ಕಳು. ಚಾಸ5 ಮತ್ತು 6 ನಮ್ಮ ಗ್ರಾಮಸ್ಥರು. ಆರೋಪಿಗಳು ನಮ್ಮ ಸಂಬಂಧಿಕರು. ಸುಮಾರು 2 ವರ್ಷಗಳ ಹಿಂದೆ ನಾನು, ಫ್ರಾಸ1 ಚಾಸ2 ಮತ್ತು 4 ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 2 ಮತ್ತು 3 ನೇ ಆರೋಪಿಗಳು ದೊಣ್ಣೆಯಿಂದ ಕತ್ತಿನ ಭಾಗಕ್ಕೆ ಹಲ್ಲೆ ಮಾಡಿರುತ್ತಾರೆ. ಎಲ್ಲಾ ಆರೋಪಿಗಳು ನನಗೆ, ಚಾಸ2, 3 ಮತ್ತು ಫ್ರಾಸ1 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿ ನನ್ನ ಮಾಂಗಲ್ಯ ಸರ ಕಿತ್ತುಹಾಕಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 4 ನೇ ಆರೋಪಿಗಳು ನ್ಯಾಯಾಲಯದ ಮುಂದೆ ಇರುತ್ತಾರೆ, ಉಳಿದ ಆರೋಪಿಗಳು ಗೈರುಹಾಜರಾಗಿದ್ದು ಅವರನ್ನು ಗುರುತಿಸಲು ಅವರ ಪರ ವಕೀಲರು ತಕರಾರು ಇಲ್ಲ ಎಂದು ತಿಳಿದಿರುತ್ತಾರೆ.

(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲುಃಎಪಿಪಿ ರವರಿಂದಃ

ದಿನಾಂಕ 22.4.2019 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ನಾನು, ಫ್ರಾಸ1, ಚಾಸ2 ಮತ್ತು 4 ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ಆಗ ಈ ಕೇಸಿನ ಆರೋಪಿಗಳು ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಈ ಜಮೀನು ನಮಗೆ ಸೇರಿದ್ದು ಎಂದು ತಡೆದು ನಿಲ್ಲಿಸಿರುತ್ತಾರೆ ಎಂದರೆ ಸರಿ. ಫ್ರಾಸ1 ರವರು ಆರೋಪಿಯನ್ನು ಪ್ರಶ್ನಿಸಿದಾಗ ಅವರು ಕೆಟ್ಟ ಪದಗಳಿಂದ ಆತನನ್ನು ನಿಂದಿಸಿರುತ್ತಾರೆ ಎಂದರೆ ಸರಿ. 2 ಆರೋಪಿ ಫ್ರಾಸ1 ರವರಿಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. 4 ನೇ ಆರೋಪಿ ನನ್ನ ಮಗಳನ್ನು ತಳ್ಳಿ ಬೀಳಿಸಿರುತ್ತಾರೆ ಎಂದರೆ ಸರಿ. 3 ನೇ ಆರೋಪಿ ನನಗೆ ಅವಮಾನವಾಗುವ ರೀತಿಯಲ್ಲಿ ಕೈಯನ್ನು ಹಿಡಿದು

ಎಳೆದಾಡಿರುತ್ತಾರೆ ಎಂದರೆ ಸರಿ. ಜಮೀನು ತಂಟೆಗೆ ಬಂದರೆ ನಿಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ</u>

ಆರೋಪಿಗಳು ನಮ್ಮ ಭಾವನ ಮಕ್ಕಳು ಎಂದರೆ ಸರಿ. 2 ನೇ ಆರೋಪಿ ಸರ್ವೆ ನಂ. 84 ಸಂಬಂಧ ದಾವೆ ಹೂಡಿರುತ್ತಾರೆ ಎಂದರೆ ಸರಿ. ಅದರಲ್ಲಿ ಸ್ವಲ್ಪ ಜಮೀನು ಸ್ವಾಧೀನವಾಗಿರುತ್ತದೆ ಎಂದರೆ ಸರಿ ಭೂ ಪರಿಹಾರ ನನಗೆ ನೀಡಬಾರದು ಎಂದು ಆರೋಪಿಗಳು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂ. 84 ರಲ್ಲಿ ಆರೋಪಿಗಳ ತಂದೆ ಹೆಸರಿನಲ್ಲಿ 2-10 ಎಕರೆ ಇರುತ್ತದೆ ಎಂದರೆ ಸರಿ. ಚಾಸ4 ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾಳೆ ಎಂದರೆ ಸರಿ. ಗಲಾಟೆಯಾದಾಗ ನಾನು ಜಮೀನಿನಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ತಾಳಿಯನ್ನು ಕಿತ್ತುಹಾಕಿರುತ್ತಾರೆ ಎಂದು ಪೋಲೀಸರಿಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ಹರಿದು ಹೋದ ಬಟ್ಟೆಯನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು, ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ಮಗನಿಗೆ ಹಲ್ಲೆ ಮಾಡಿದಾಗ ನಾನು ಇರಲಿಲ್ಲ. 2 ನೇ ಆರೋಪಿ ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಿವಿಲ್ ವ್ಯಾಜ್ಯಕ್ಕೆ ಅನುಕೂಲವಾಗಲಿ ಎಂದು ನಾನು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಎಂದಿಗೂ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ2 ಮಾಡುವ ಕಾಲಕ್ಕೆ ಚಾಸ9 ಮತ್ತು 10 ರವರು ಹಾಜರಿದ್ದರು. ಅವರು ನಮ್ಮ ಗ್ರಾಮಸ್ಥರು ಎಂದರೆ ಸರಿ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ